# 'ಪ್ರಿಯತಮ' ಡಿ ಕ್ಯಾಪ್ರಿಯೊ

ದೀಪಿಕಾ ಪಡುಕೋಣೆ ಮದುವೆ ಆಗುವುದಕ್ಕಿಂತ ಮುಂಚಿನ ಕಥೆಯಿದು. ಪ್ರತಿದಿನ ರಾತ್ರಿ ಮಲಗುವುದಕ್ಕೆ ಮುನ್ನ ಆಕೆ ಪ್ರಖ್ಯಾತ ನಟನೊಬ್ಬನ ಫೋಟೋಗೆ ಮುತ್ತಿಕ್ಕಿ ಮಲಗುತ್ತಿದ್ದಳಂತೆ! ಹಾಗೆಂದು ಆಕೆಯೇ ಇತ್ತೀಚೆಗೆ ಬಹಿರಂಗಪಡಿಸಿದ್ದಾಳೆ. 'ನಾನು ಮಾತ್ರವಲ್ಲ, ನನ್ನ ತಂಗಿಯೂ ಆತನ ಫೋಟೊಗೆ ಮುತ್ತಿಕ್ಕಿಯೇ ಮಲಗುತ್ತಿದ್ದುದು' ಎಂದು ದೀಪಿಕಾ ಹೇಳಿರುವುದು ಸಾಮಾಜಿಕ ಜಾಲತಾಣಗಳಲ್ಲಿ ದೊಡ್ಡ ಸುದ್ದಿಯಾಗಿದೆ. ಆಕೆ ಮತ್ತು ಆಕೆಯ ತಂಗಿ ಮುತ್ತಿಡುತ್ತಿದ್ದುದು ಬಾಲಿವುಡ್‌ನ 'ಟೈಟಾನಿಕ್' ಖ್ಯಾತಿಯ ಲಿಯೊನಾರ್ಡೊ ಡಿ ಕ್ಯಾಪ್ರಿಯೋ ಚಿತ್ರಕ್ಕೆ!

'ನಿಜಕ್ಕೂ ಆತ ಹ್ಯಾಂಡ್‌ಸಮ್. ಅದರ ಬಗ್ಗೆ ಎರಡು ಮಾತೇ ಇಲ್ಲ' ಎನ್ನುವುದು ದೀಪಿಕಾ ಉವಾಚ. ದೀಪಿಕಾಳ ಈ ಹೇಳಿಕೆಯ ಬಗ್ಗೆ ಆಕೆಯ ಪತಿ, ನಟ ರಣ್‌ವೀರ್‌ಸಿಂಗ್ ತಲೆ ಕೆಡಿಸಿಕೊಳ್ಳಲಿಕ್ಕಿಲ್ಲ. ಏಕೆಂದರೆ, ತನ್ನ ಹೆಂಡತಿ ಈಗ ತನ್ನನ್ನಲ್ಲದೆ ಬೇರೆ ಯಾರನ್ನೂ ಪ್ರೀತಿಸುತ್ತಿಲ್ಲ ಎಂದು ಆತನಿಗೆ ಖಚಿತವಾಗಿ ಗೊತ್ತಿರುತ್ತದೆ. ಹಳೆಯದೊಂದು ನೆನಪನ್ನು ಕೆದಕುವ ಕೆಲಸವಷ್ಟೇ ದೀಪಿಕಾ ಮಾಡಿರುವುದು.

ಲಿಯೊನಾರ್ಡೊ ಡಿ ಕ್ಯಾಪ್ರಿಯೊ ಹಾಲಿವುಡ್ ಮಾತ್ರವಲ್ಲ, ಜಗತ್ತಿನ ಬಹುತೇಕ ಭಾಷೆಯ ಚಿತ್ರರಂಗದ ನಟ, ನಟಿಯರಿಗೆ ಹುಚ್ಚು ಹಿಡಿಸಿರುವಾತ. 'ಟೈಟಾನಿಕ್' ಸಿನಿಮಾ ಅದರ ಚಿತ್ರಕಥೆ, ಭವ್ಯತೆ ಮತ್ತು ನಿರ್ದೇಶನದಿಂದಾಗಿಯೇ ಜಗದ್ವಿಖ್ಯಾತಿ ಹೊಂದಿದ್ದು. ಚಿತ್ರದ ಜೊತೆಗೇ ಹೀರೋ ಲಿಯೊನಾರ್ಡೊ ಮತ್ತು ಹೀರೋಯಿನ್ ಕೇಟ್ ವಿನ್ಸ್‌ಲೆಟ್ ಕೂಡಾ ಖ್ಯಾತಿಯ ಉತ್ತುಂಗಕ್ಕೇರಿದರು. 'ಇಂತಹ ಇನ್ನೊಂದು ಸುಂದರ ಜೋಡಿ ಇಲ್ಲ' ಎಂದೇ ಪ್ರಚಾರ ನಡೆಯಿತು. ಆರಂಭದಲ್ಲಿ ಕೇಟ್ ಜನಪ್ರಿಯತೆಯಲ್ಲಿ ಒಂದು ಹೆಜ್ಜೆ ಮುಂದೆ ಇದ್ದರೂ, ಬಳಿಕ ಲಿಯೊನಾರ್ಡೊ ಬಹುಬೇಡಿಕೆಯ ತಾರೆಯಾದ.

ಲಿಯೊನಾರ್ಡೊ ಬಗ್ಗೆ ತಲೆಕೆಡಿಸಿಕೊಂಡ ಸಿನಿಮಾ ಹೀರೋಯಿನ್‌ಗಳು ಮತ್ತು ಸೆಲೆಬ್ರಿಟಿಗಳಿಗೂ ಲೆಕ್ಕವಿಲ್ಲ. ಖ್ಯಾತ ಗಾಯಕಿ ರೆಹಾನ್ನಾಳಿಂದ ಹಿಡಿದು ಸೂಪರ್ ಮಾಡೆಲ್ ನವೊಮಿ ಕ್ಯಾಂಪ್‌ಬೆಲ್‌ವರೆಗೆ ಎಲ್ಲರ ಹೆಸರೂ ಡಿ ಕ್ಯಾಪ್ರಿಯೋನ ಗರ್ಲ್‌ಫ್ರೆಂಡ್‌ಗಳ ಪಟ್ಟಿಯಲ್ಲಿ ಓಡಾಡಿದೆ. ಸದ್ಯಕ್ಕೆ ಲಿಯೊನಾರ್ಡೋನ ಸಂಗಾತಿ ಆಗಿರುವಾಕೆ ಮಾಡೆಲ್ ಕ್ಯಾಮಿಲಾ ಮರೋನ್. 23ರ ಹರೆಯದ ಕ್ಯಾಮಿಲಾ ಮತ್ತು 45ರ ಹರೆಯದ ಲಿಯೊನಾರ್ಡೊ ನಡುವಣ ಪ್ರೇಮದ ಬಗ್ಗೆ ಹತ್ತಾರು ಕಥೆಗಳಿವೆ. 2018ರ ಜನವರಿಯಲ್ಲಿ ಇಬ್ಬರೂ ಕೊಲರಾಡೋಗೆ ಪ್ರವಾಸ ಹೋದ ಬಳಿಕ ಇಬ್ಬರ ಮಧ್ಯೆ ಪ್ರೇಮ ಕುದುರಿದ್ದಂತೆ. ಅಲ್ಲಿಂದೀಚೆಗೆ ಇಬ್ಬರೂ ಅಂಟಿಕೊಂಡೇ ಓಡಾಡುತ್ತಿದ್ದಾರೆ. ವಯಸ್ಸಿನಲ್ಲಿ 23 ವರ್ಷಗಳ ಅಂತರ ಇರುವ ಈ ಇಬ್ಬರ ನಡುವೆ ಅದ್ಹೇಗೆ ಪ್ರೇಮವಾಯಿತೋ ಎಂದು ಪ್ರಶ್ನಿಸಿದವರಿಗೆ ಲೆಕ್ಕವಿಲ್ಲ. ಲಿಯೊನಾರ್ಡೋನನ್ನು ಕೇಳಿದರೆ, 'ರಿಲೇಷನ್‌ಷಿಪ್ ಬಗ್ಗೆ ನಾನು ಹೆಚ್ಚು ಮಾತನಾಡುವುದಿಲ್ಲ' ಎಂದಿದ್ದಾನೆ.

ಆದರೆ ಇಲ್ಲೊಂದು ಕುತೂಹಲದ ಸಂಗತಿಯಿದೆ. ಲಿಯೊನಾರ್ಡೊ ಈವರೆಗೆ ಪ್ರೀತಿಸಿದ, ರಿಲೇಷನ್‌ಷಿಪ್ ಬೆಳೆಸಿಕೊಂಡವರೆಲ್ಲ ಹದಿಹರೆಯದವರು! ಅಫ್‌ಕೋರ್ಸ್, ಅವನ ಹದಿಹರೆಯದಲ್ಲೂ ಕೆಲವು ಪ್ರೇಮಗಳು ಸಂಭವಿಸಿವೆ. ಸಿನಿಮಾಗಳಲ್ಲಿ ಜೊತೆಗೆ ನಟಿಸಿದ ಬ್ರಿಗೆಟ್ ಹಾಲ್, ಬ್ರಿಟ್ಟಾನಿ ಡೇನಿಯಲ್, ಕ್ರಿಸ್ಟೀನ್ ಜಂಗ್, ಕ್ಲೇರ್ ಡೇನ್ಸ್, ಬಿಜೋ ಫಿಲಿಪ್ಸ್– ಹೀಗೆ ಲಿಯೊನಾರ್ಡೊ ಜೊತೆಗೆ 'ರಿಲೇಷನ್‌ಷಿಪ್' ಬೆಳೆಸಿಕೊಂಡವರ ಪಟ್ಟಿ ಉದ್ದವಿದೆ. ಹಾಗೆಂದೇ ಹಾಲಿವುಡ್‌ನಲ್ಲಿ ಈತನನ್ನು 'ಎವರ್‌ಗ್ರೀನ್ ಲವರ್' ಎನ್ನುವವರೂ ಇದ್ದಾರೆ.

ತಂದೆ ಜರ್ಮನಿ ಮೂಲದ ಇಟಾಲಿಯನ್, ಇಬ್ಬರು ಅಜ್ಜಂದಿರು ರಷ್ಯನ್, ಹುಟ್ಟಿದ್ದು ಅಮೆರಿಕದಲ್ಲಿ– ಹೀಗೆ ಲಿಯೊನಾರ್ಡೊ ಒಂದು ರೀತಿಯಲ್ಲಿ ಗ್ಲೋಬಲ್ ವ್ಯಕ್ತಿ. 'ಟೈಟಾನಿಕ್' ಕೂಡಾ ಜಾಗತಿಕ ಮಟ್ಟದಲ್ಲಿ ಜನಪ್ರಿಯತೆ ತಂದುಕೊಟ್ಟಿತು. ಆದರೆ ಲಿಯೊನಾರ್ಡೊ ವೃತ್ತಿಜೀವನದ ಆರಂಭ ಅಷ್ಟೇನೂ ಆಶಾದಾಯಕವಾಗಿರಲಿಲ್ಲ. ಚಿತ್ರರಂಗಕ್ಕೆ ಪ್ರವೇಶ ಪಡೆಯಲು ಒಬ್ಬ ಸರಿಯಾದ ಏಜೆಂಟ್ ಕೂಡಾ ಸಿಕ್ಕಿರಲಿಲ್ಲ. ಒಬ್ಬ ಮುಖ್ಯ ಏಜೆಂಟನನ್ನು ಸಂಪರ್ಕಿಸಿದಾಗ 'ನಿನ್ನ ಹೆಸರನ್ನು ಲೆನ್ನಿ ವಿಲಿಯಮ್ಸ್ ಅಂತ ಬದಲಿಸಿಕೊ. ಅಮೆರಿಕನ್ ಅಂತ ಜನ ತಿಳಿದುಕೊಂಡು ಅವಕಾಶ ಕೊಡಬಹುದು' ಎಂದಿದ್ದನಂತೆ. ಆರಂಭದಲ್ಲಿ 100ಕ್ಕೂ ಹೆಚ್ಚು ಆಡಿಷನ್‌ಗಳಿಗೆ ಹೋಗಿದ್ದರೂ ಸಿನಿಮಾದಲ್ಲಿ ಅವಕಾಶ ಸಿಕ್ಕಿರಲಿಲ್ಲ! ಒಂದೂವರೆ ವರ್ಷ ಕಾಲ ಅಲೆದಾಡಿದ ಬಳಿಕ ಚಿತ್ರರಂಗದ ಸಹವಾಸವೇ ಬೇಡ ಎಂದು ನಿರ್ಧರಿಸಿದ್ದ ಲಿಯೊನಾರ್ಡೋಘೆ ಅಪ್ಪನೇ ಧೈರ್ಯ ತುಂಬಿದ್ದ. ಕೊನೆಗೆ ಟಿವಿ ಸೀರಿಯಲ್‌ಗಳಲ್ಲಿ ನಟಿಸಲು ಆರಂಭಿಸಿದ. ಟಿವಿ ಧಾರವಾಹಿಗಳಲ್ಲಿ ಒಳ್ಳೆಯ ನಟ ಎಂಬ ಹೆಸರು ಮತ್ತು ಪ್ರಶಸ್ತಿಗಳೂ ಸಿಕ್ಕಿದ ಬಳಿಕ, ವಿಡಿಯೊ ಫಿಲ್ಮ್‌ಗಳಲ್ಲಿ ಅವಕಾಶ ಸಿಕ್ಕಿತು.



ನಿರ್ದೇಶಕ ಜೇಮ್ಸ್ ಕ್ಯಾಮರೂನ್ ತನ್ನ ಸಿನಿಮಾ 'ಟೈಟಾನಿಕ್'ಗೆ ಆಯ್ಕೆ ಮಾಡಿದಾಗ ಲಿಯೊನಾರ್ಡೋಗೆ ಆ ಪಾತ್ರಕ್ಕೆ ನ್ಯಾಯ ಸಲ್ಲಿಸುವ ವಿಶ್ವಾಸ ಇರಲಿಲ್ಲವಂತೆ. ಆದರೆ ಕ್ಯಾಮರೂನ್ ಧೈರ್ಯ ತುಂಬಿದ್ದು ಗೆಲುವಿನ ಮೆಟ್ಟಿಲು ಹತ್ತಿಸಿತು. ಟೈಟಾನಿಕ್ ನಿರ್ಮಿಸಿದ ದಾಖಲೆ ಅಷ್ಟಿಷ್ಟಲ್ಲ. ಜಗತ್ತಿನಾದ್ಯಂತ 2.1 ಶತಕೋಟಿ ಡಾಲರ್ ಹಣ ಬಾಚಿಕೊಂಡ ಈ ಸಿನಿಮಾ 11 ಆಸ್ಕರ್ ಪ್ರಶಸ್ತಿಗಳನ್ನು ಗೆದ್ದುಕೊಂಡದ್ದು ಇತಿಹಾಸ. ಮೊದಲಿಗೆ ಸುಂದರಾಂಗ ಎಂದಷ್ಟೇ ಖ್ಯಾತಿ ಪಡೆದಿದ್ದ ಲಿಯೊನಾರ್ಡೊ ಈಗ ಅತ್ಯುತ್ತಮ ನಟ ಎನ್ನುವುದೂ ಸಾಬೀತಾಗಿದೆ. ಆದರೆ ಈಗಲೂ ಬ್ಯಾಚುಲರ್ ಆಗಿ ಉಳಿದಿರುವುದು ಆತನ ಕುರಿತು 'ಕಥೆ'ಗಳ ಸಂಖ್ಯೆಯನ್ನೂ ಹೆಚ್ಚಿಸುತ್ತಿದೆ.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65